ಬಿಳಿಯ ನೇರವಾಗಿ ಬಾಲನ್ ಪಣಿಕ್ಕರ್ ಅವರ ಬಳಿಗೆ ಬಂದು ಏನೇನೋ ಕೇಳಿದ ಆತುರದಿಂದ. ಇಂಗ್ಲಿಷ್‌ನಲ್ಲಿ ಕೇಳಿದ್ದರಿಂದ ಪಣಿಕ್ಕರ್‌ಗೆ ಏನೂ ಅರ್ಥವಾಗಲಿಲ್ಲ. ಬಿಳಿಯನ ಹಣೆಯಲ್ಲಿ ಬೆವರು ಕಾಣಿಸಿಕೊಳ್ಳತೊಡಗಿತು. ಕಣ್ಣುಗಳು ದುರುಗುಟ್ಟುತ್ತಿದ್ದವು. ತುಟಿಯಲ್ಲಿ ತೀವ್ರವಾದ ಆವೇಶ! ಆತ ಯಾಚಕನಂತೆ ವಿನೀತನಾಗಿ ಪಣಿಕ್ಕರಿಗೆ ಸನ್ನೆ ಮಾಡಿ ಅರ್ಥ ಮಾಡಿಸಲು ಪ್ರಯತ್ನಿಸಿದ. ಜಾನಕಿ ಮಕ್ಕಳನ್ನು ನೋಡಿದಳು. ಅವರೆಲ್ಲಾ ಅಮ್ಮನತ್ತ ನೋಡಿದರು. ಕಾರಿನೊಳಗಿದ್ದ ಕಪ್ಪುಗೂದಲಿನ ಯುವತಿಯೊಬ್ಬಳು ಬಿಳಿಯನಿಗೆ ಏನೋ ಹೇಳಿದಳು. ತಕ್ಷಣ ಬಿಳಿಯ ಎಲ್ಲವನ್ನು ಬಿಟ್ಟು ಸಂಪಿಗೆ ಮರದತ್ತ ಓಡತೊಡಗಿದ. ಓಟದ ನಡುವೆ ಜೀನ್ಸ್ ಪ್ಯಾಂಟ್ ಬಾವಿಕಟ್ಟೆಯಲ್ಲಿ ಬಿದ್ದುಕೊಂಡಿತು. ಬೆಳೆದು ನಿಂತ ಹಸಿ ಹುಲ್ಲುಗಳ ಮರೆಯಲ್ಲಿ ಅಪರಿಚಿತವಾದ ಸದ್ದುಗದ್ದಲುಗಳು ಕೇಳಿದಾಗ ಪಣಿಕ್ಕರ್‌ಗೆ ವಿಷಯದ ಅರಿವಾಯಿತು. ಅವರೊಳಗಿನಿಂದ ನಗುವಿನ ಬುಗ್ಗೆ ಎದ್ದು ಬಂತು. ಅದನ್ನು ನಿಯಂತ್ರಿಸಲಾಗದೆ ಮಕ್ಕಳಿಗೂ ಹರಡಿತು. ನಕ್ಕು ನಕ್ಕು ಮಕ್ಕಳ ಕಣ್ಣುಗಳು ತುಂಬಿ ಬಂದವು. 'ಕಿಸೀ ಬೇಡ್ರೋ' ಜಾನಕಿ ಕೆಂಡಾಮಂಡಲಳಾದಳು. 'ಗುಳಿಗನೊಂದಿಗೆ ಆಟ ಆಡ್ತಾ ಇದ್ದೀರ ಅನ್ನೋದನ್ನು ಮರೀಬೇಡಿ' ಅವಳು ಹೇಳಿದಳು.

ಕಲ್ಲುಗಳ ಮೇಲೆ ಒಣ ಹಾಕಿದ್ದ ಕೆಂಬಟ್ಟೆಗಳ ನಡುವೆ ಕಾಣುತ್ತಿರುವ ಬಿಳಿಯನ ತಲೆಗೂದಲಿಗೆ ಮಧ್ಯಾಹ್ನದ ಬಿಸಿಲಿಗಿಂತಲೂ ಹೆಚ್ಚು ಹೊಳಪಿತ್ತು. ಅದು ಗಾಳಿಯಲ್ಲಿ ಹಾರಾಡುತ್ತಿತ್ತು. ಗುಳಿಗನ ಸಂಪಿಗೆ ಮರ ಅವನಿಗೆ ನೆರಳಾಗಿತ್ತು. ಬಾಲನ್ ಪಣಿಕ್ಕರ್ ಕಿವಿಗೊಟ್ಟು ಕೇಳಿದರು. ಎಲ್ಲಾ ನೀತಿನಿಯಮಗಳಿಗೂ ತಿಲಾಂಜಲಿ ಇಟ್ಟು ಹುಲ್ಲಿನ ಪೊದೆಗಳ ಮರೆಯಲ್ಲಿ ಒಬ್ಬ ಮನುಷ್ಯ ಪ್ರಾಣಿ ಆತ್ಮ ನಿವೃತ್ತಿ ಪಡೆದು ಸ್ವತಂತ್ರವಾಗುತ್ತಿದ್ದಾನೆ. ಈ ಭೂಮಿಯ ಯಾವುದೋ ಅಂಚಿನಲ್ಲಿ ಇಂತಹದೊಂದು ಮುಹೂರ್ತವನ್ನು ಇವನ ಬದುಕಿನ ಪುಟಗಳಲ್ಲಿ ಮೊದಲೇ ದಾಖಲಿಸಿರಬಹುದೆ? ಪಣಿಕ್ಕರ್ ಸುಖಾಸುಮ್ಮನೆ ಚಿಂತಿಸಿದರು. ಕೆಲವು ನಿಮಿಷಗಳ ತರುವಾಯ ಎಲ್ಲವೂ ಶಾಂತ. ಹುಲ್ಲಿನ ಪೊದೆಯೊಳಗಿನಿಂದ ತೃಪ್ತಿಯ ಮಂದಹಾಸ ಬೀರುತ್ತಾ ಮೇಲೆದ್ದು ಬಂತು ಬಿಳಿಯನ ಕೆಂಪು ಮುಖ.

'ಕಲಶ ಮುಗಿಯಿತು' ಜಾನಕಿ ಕ್ಯಾಕರಿಸಿ ಉಗಿಯುತ್ತಾ ಹೇಳಿದಳು. 'ಇನ್ನು ನೀರು ತಗೊಂಡೋಗಿ ಕೊಡ್ರಲ್ಲ.' ಬಾಲನ್‌ಪಣಿಕ್ಕರ್ ಚೆನ್ನಾಗಿರುವ ಪಾತ್ರೆಗಾಗಿ ತಡಕಾಡಿದರು. ಬಹುತೇಕ ಎಲ್ಲಾ ಪಾತ್ರೆಗಳು ಮಸಿ ಹಿಡಿದು ಕಪ್ಪು ಬಣ್ಣಕ್ಕೆ ತಿರುಗಿದ್ದವು. ಇನ್ನೂ ಕೆಲವು ನಗ್ಗಿ ಹೋಗಿದ್ದವು. ಪ್ರತಿಯೊಂದು ಪಾತ್ರೆಯನ್ನು ತೆಗೆಯುವಾಗಲೂ ಪಣಿಕ್ಕರ್ ಗೊಣಗುತ್ತಿದ್ದರು. 'ಇದರಲ್ಲಿ ಹೇಗೆ ಕೊಡೋದು... ಇದರಲ್ಲಿ ಹೇಗೆ ಕೊಡೋದು..' ಕೊನೆಗೆ ಒಳಕೋಣೆಯಲ್ಲಿಟ್ಟಿದ್ದ ಕಂಚಿನಗಿಂಡಿ ಅವರ ಕಣ್ಣಿಗೆ ಬಿತ್ತು. ಪಣಿಕ್ಕರ್ ತೃಪ್ತಿಯಿಂದ ಅದನ್ನೆತ್ತಿಕೊಂಡರು. ಅದರಲ್ಲಿದ್ದ ನೀರಿನಿಂದ ತುಳಸಿ ದಳ, ಹೂವುಗಳನ್ನೆಲ್ಲಾ ಹೊರತೆಗೆದು ಸಂಪಿಗೆ ಮರದತ್ತ ದಾಪುಗಾಲು ಹಾಕಿದರು. 'ತಿಕ ತೊಳೆಯೋದಿಕ್ಕೆ ಗಿಂಡಿಯ ಆ ನೀರು ಕೊಡಬೇಡಿ...' ಜಾನಕಿ ಹಿಂದಿನಿಂದ ಕೂಗಿ ಹೇಳಿದರೂ ಅದು ಪಣಿಕ್ಕರ್‌ನ್ನು ಮುಟ್ಟಲಿಲ್ಲ. ಬಂದವರು ಅತಿಥಿಗಳು. ನಾವು ಆತಿಥೇಯರು. ಪಣಿಕ್ಕರ್ ನಕ್ಕರು.

ಗಿಂಡಿಯನ್ನು ಮರಳಿಸುವಾಗ ಬಿಳಿಯ ಕೃತಜ್ಞತೆಯ ಮಾತುಗಳನ್ನು ಹೇಳಿದ. ಅದು ಪಣಿಕ್ಕರ್‌ಗೆ ಅರ್ಥವಾಯಿತು. ಉಪಕಾರ ಮಾಡಿದವರಿಗೆ ಅವರು ಹಾಗೆ ಹೇಳುವುದುಂಟು. 'ಥ್ಯಾಂಕ್ಯು.. ಥ್ಯಾಂಕ್ಯು ವೆರಿಮಚ್' ಪಣಿಕ್ಕರ್ ಎರಡು ಸಲ ಓ.ಕೆ. ಎಂದರು. ಅದರೊಂದಿಗೆ ಅವರ ಆತ್ಮವಿಶ್ವಾಸ ಹೆಚ್ಚಾಯಿತು. ಇನ್ನು ಮುಂದೆ ವಿದೇಶಿಯರೊಂದಿಗೆ ತಾನು ವ್ಯವಹರಿಸಬಹುದೆಂಬ ನಂಬಿಕೆ ಪಣಿಕ್ಕರರಲ್ಲಿ ಉಂಟಾಯಿತು.

ಅರೆನಗ್ನನಾದ ಬಿಳಿಯ ಕತ್ತೆತ್ತಿ ನಡೆದ. ಬೆರಳ ಸಂಧಿಯಲ್ಲಿರಿಸಿದ್ದ ಸಂಪಿಗೆ ಹೂವನ್ನು ಅವನು ಆಗಾಗ ಮೂಸುತ್ತಿದ್ದ.

ಬಿಳಿಯನ ಸ್ಥೂಲಕಾಯವನ್ನು ಅಪ್ಪನ ಪೀಚು ದೇಹದೊಂದಿಗೆ ಹೋಲಿಸಿ ಮಗ ಮೊಕ್ತೇಸರನನ್ನು